## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 204

ಸದಸ್ಯರ ಹೆಸರು : ಶ್ರೀ. ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 12/08/2025

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪಟ್ಟಣ ಪಂಚಾಯತ್ ಗಳಾಗಿ ಮಾರ್ಪಾಡು ಮಾಡಲು ಅರ್ಹತೆ ಇರುವ ಗ್ರಾಮ ಪಂಚಾಯತ್‌ಗಳು ಯಾವುವು: ಎಷ್ಟು ಗ್ರಾಮ ಪಂಚಾಯತ್ ಗಳನ್ನು ಪಟ್ಟಣ ಪಂಚಾಯತ್ ಗಳನ್ನು ನಗರ ಸಭೆಗಳು ಪಂಚಾಯತ್ ಗಳಾಗಿ ಪರಿವರ್ತನೆಗೊಳ್ಳಲು ಬೇಡಿಕೆಗಳನ್ನು ಸಲ್ಲಿಸಿವೆ (ವಿವರ ನೀಡುವುದು) ; | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ-349 ರನ್ವಯ ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಪ್ರದೇಶದ ಜನಸಂಖ್ಯೆಯು 2011 ರ ಜನಗಣತಿಯನ್ವಯ 10,000 ದಿಂದ 20,000, ಅಲ್ಲಿನ ಜನಸಾಂದ್ರತೆ ಪ್ರತೀ ಚದರ ಕಿಲೋ ಮೀಟರ್‌ಗೆ 400 ಮತ್ತು ಆ ಪ್ರದೇಶದಲ್ಲಿನ ಕೃಷಿಯೇತರ ಚಟುವಟಿಕೆಯು ಒಟ್ಟಾರೆ ಚಟುವಟಿಕೆಗಳಲ್ಲಿ 50% ಕ್ಕಿಂತ ಹೆಚ್ಚು ಇರಬೇಕಾಗುತ್ತದೆ. ಈ ಮಾನದಂಡವನ್ನು ಹೊಂದಿರುವ ಯಾವುದೇ ಪ್ರದೇಶವನ್ನು ಪಟ್ಟಣ ಪಂಚಾಯಿತಿಯನ್ನಾಗಿ ರಚಿಸಲು ಪರಿಗಣಿಸಬಹುದಾಗಿರುತ್ತದೆ. ಅಲ್ಲದೇ ಒಂದು ಸ್ಥಳೀಯ ಸಂಸ್ಥೆಯೊಂದಿಗೆ ಬೇರೆ ಗ್ರಾಮ ಅಥವಾ ಪ್ರದೇಶಗಳನ್ನು ಸೇರ್ಪಡೆ ಮಾಡುವುದಕ್ಕೂ ಅವಕಾಶವಿರುತ್ತದೆ. ಈ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಪಟ್ಟಣ ಪಂಚಾಯಿತಿ, ನಗರಸಭೆಗಳನ್ನು ರಚಿಸುವಂತೆ ಕೋರಿ ಸಲ್ಲಿಸಲಾಗುವ ದಾಖಲೆಗಳನ್ವಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ನಿಯಮಾನುಸಾರ ಅರ್ಹವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರಲ್ಲಿನ ಮಾನದಂಡಗಳನ್ವಯ ಅಂತಹ ಪ್ರಸ್ತಾವನೆಯನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಪರಿಶೀಲಿಸಲಾಗುತ್ತದೆ.<br>ಪ್ರಸ್ತುತ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಯಾವುದೇ ಸ್ಥಳೀಯ ಸಂಸ್ಥೆಯಿಂದ ಪಟ್ಟಣ ಪಂಚಾಯಿತಿ ಹಾಗೂ ನಗರಸಭೆಯನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ. |
| ಆ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪಟ್ಟಣ ಪಂಚಾಯತ್ ಪುರಸಭೆ ಮತ್ತು ನಗರಸಭೆಗಳು ಅರ್ಹತೆ ಇಲ್ಲದೇ ದ್ವಿತೀಯ ದರ್ಜೆ ಗುಮಾಸ್ತರುಗಳನ್ನು ಪುರಸಭೆ ಆಯುಕ್ತರು, | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಪಟ್ಟಣ ಪಂಚಾಯಿತಿ ಪುರಸಭೆ ಮತ್ತು ನಗರಸಭೆಗಳಿಗೆ ಪ್ರಸ್ತುತ ದ್ವಿತೀಯ ದರ್ಜೆ ಗುಮಾಸ್ತರನ್ನು ಆಯುಕ್ತರು, ಮುಖ್ಯಾಧಿಕಾರಿಗಳನ್ನಾಗಿ ನೇಮಿಸಲಾಗಿರುವುದಿಲ್ಲ. |

| | | |
|---|---|---|
| | ಮುಖ್ಯಾಧಿಕಾರಿಗಳನ್ನು ನೇಮಿಸಲಾಗಿದೆಯೇ (ವಿವರ ನೀಡುವುದು); | |
| ಇ | ನಗರಸಭೆ, ಪಟ್ಟಣ ಪಂಚಾಯತ್ ಗಳಿಗೆ ಆಯುಕ್ತರು, ಸಿ.ಓ ಗಳಿಗೆ ಇರುವ ಅರ್ಹತೆಗಳಾವುವು: (ವಿವರ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 82 ಇಎಂಸಿ 2016; ದಿನಾಂಕ:07/07/2022 ರಲ್ಲಿ ಅಂತಿಮಗೊಳಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಶೆಡ್ಯೂಲ್–III ರಲ್ಲಿ ನಿಗದಿಪಡಿಸಿರುವಂತೆ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಪೌರಾಯುಕ್ತರು ಮತ್ತು ಮುಖ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿರುತ್ತದೆ: |
| ಈ | ಪಟ್ಟಣ ಪಂಚಾಯತ್ ಗಳಿಗೆ ನಗರಸಭೆ ಪುರಸಭೆ ಮತ್ತು ಪಟ್ಟಣ ಪಂಚಾಯತ್ ಗಳಿಗೆ ಚುನಾವಣೆ ನಡೆದು ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ನೇಮಿಸಲು ಬಾಕಿ ಇರುವ ಸ್ಥಳೀಯ ಸಂಸ್ಥೆಗಳಾವುವು? (ವಿವರ ನೀಡುವುದು) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಚುನಾವಣೆ ನಡೆದು, ಅಧ್ಯಕ್ಷರು ಮತ್ತು ಉಪಾಧ್ಯಕರನ್ನು ನೇಮಿಸಲು ಬಾಕಿ ಇರುವ ಸ್ಥಳೀಯ ಸಂಸ್ಥೆಗಳು ಯಾವುದೂ ಇರುವುದಿಲ್ಲ. |

| ಸ್ಥಳೀಯ ಸಂಸ್ಥೆಗಳ ಸ್ವರೂಪ | ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತೆ |
|---|---|
| ಪೌರಾಯುಕ್ತರು: | |
| ಗ್ರೇಡ್–1 ನಗರಸಭೆ | ಕೆ.ಎಂ.ಎ.ಎಸ್, ಪೌರಾಯುಕ್ತರು ದರ್ಜೆ–1 |
| ಗ್ರೇಡ್–2 ನಗರಸಭೆ | ಕೆ.ಎಂ.ಎ.ಎಸ್, ಪೌರಾಯುಕ್ತರು ದರ್ಜೆ–2 |
| ಮುಖ್ಯಾಧಿಕಾರಿ: | |
| ಪುರಸಭೆ | ಕೆ.ಎಂ.ಎ.ಎಸ್, ಮುಖ್ಯಾಧಿಕಾರಿ ದರ್ಜೆ–1 |
| ಪಟ್ಟಣ ಪಂಚಾಯತಿ | ಕೆ.ಎಂ.ಎ.ಎಸ್, ಮುಖ್ಯಾಧಿಕಾರಿ ದರ್ಜೆ–2 |

ಸಂಖ್ಯೆ:ನಅಇ 29 ಎಲ್‌ಸಿಕ್ಯೂ 2025

(ರಹೀಂ ಖಾನ್)

ಪೌರಾಡಳಿತ ಹಾಗೂ ಹಜ್ ಸಚಿವರು